# ನೀವು ಕೇಳಿದಿರಿ?

ವಿ. ಹೇಮಂತಕುಮಾರ್, ಬೆಂಗಳೂರು

*ನಲವತ್ತರ ಚೆಲುವೆ ಲವ್ ಮಾಡ್ತೀನಿ ಬಾರೋ ಅಂತಿದ್ದಾಳಲ್ಲಾ...?*



ಒಪ್ಪಿಕೊಳ್ಳಿ. ಹುಟ್ಟಿನಿಂದಲೂ ಹೇಮಂತದಲ್ಲೇ ಇರುವವರು ಇನ್ನಾದರೂ ವಸಂತಕ್ಕೆ ಬನ್ನಿ!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

*ರಾಮ್‌ಜೀ, ವಾಸ್ತು ಪುರುಷ ಮನೆ ಕಾವಲು ಕಾಯುವುದಾದರೆ ನಮಗೆ ಪ್ರತ್ಯೇಕ ಕಾವಲುಗಾರ, ನಾಯಿ ಏಕೆ ಬೇಕು?*

ವಾಸ್ತುಪುರುಷ ಹೊಸ್ತಿಲಲ್ಲಿ ಮಲಗಿರುತ್ತಾನಂತೆ. ಮಲಗಿರುವವನನ್ನು ಯಾರೂ ತುಳಿಯದಂತೆ ಕಾಯಲು ನಾಯಿ, ಕಾವಲುಗಾರ!

ಪಿ. ಗೋವಿಂದರಾಜ್, ಶಿವಮೊಗ್ಗ

*ಹುಟ್ಟಿದ ಹಬ್ಬವನ್ನು ದೀಪ ಹಚ್ಚಿ ಆಚರಿಸಬೇಕೋ, ದೀಪ ಆರಿಸಿ ಆಚರಣೆ ಮಾಡಬೇಕೋ...?*

ಪವರ್ ಕಟ್ ಇರುವಾಗಲೋ, ಇಲ್ಲದಿರುವಾಗಲೋ ಎಂಬುದನ್ನು ತಿಳಿಸಿ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಕೌರವ ಮಣ್ಣಿನಿಂದ ಕೆಟ್ಟ, ರಾವಣ ಹೆಣ್ಣಿನಿಂದ ಕೆಟ್ಟ. ಆದರೆ ರಾಜಕಾರಣಿ?*



ಆದ ದುರ್ಗುಣ ಬೆಟ್ಟ, ಕಟ್ಟಿ ಜನರಿಗೆ ಚಟ್ಟ, ಏರಿ ಕುಳಿತನು ಪೀಠ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂಗ

*ಹುಡುಗಿಯರನ್ನು ಹೂವಿಗೆ ಏಕೆ ಹೋಲಿಸುತ್ತಾರೆ?*

ಹೂವಿನಂತೆಯೇ ಅವರನ್ನೂ ಬುಟ್ಟಿಗೆ ಹಾಕಿಕೊಳ್ಳಲು ಪ್ರಯತ್ನಿಸುವುದರಿಂದ!

ಬಿ.ಚಂದ್ರೇಗೌಡ, ಬೆಂಗಳೂರು

*ಮಗನಿಗೆ ಶತ್ರುವಿನ ಹೆಸರಿಡು ಅಂತಾರಲ್ಲಾ, ಯಾಕೆ?*

ವೃದ್ಧಾಪ್ಯದಲ್ಲಿ ಇವನೂ ಅದೇ ಆಗಬಹುದೆಂಬ ಶಂಕೆ!

ದೀಪಕ ಕೆ. ಸಿದ್ದಾಪುರ

*ದುಡ್ಡು ಕೊಟ್ಟರೂ ಜಗತ್ತಿನಲ್ಲಿ ಸಿಗದ ವಸ್ತು ಯಾವುದು?*

ಓಝೋನ್ ಪದರ!

ಎ.ಕೆ. ಪಟ್ಟಾಭಿ, ಬೆಂಗಳೂರು

*ಗಂಡು ತಾಳಿ ಕಟ್ಟುವಾಗ ಪುರೋಹಿತರು ತಾಳಿ, ತಾಳಿ ಅನ್ನುತ್ತಿರುತ್ತಾರಲ್ಲಾ, ಏಕಿರಬಹುದು?*

ಅದು ಗಂಡು ಸಂಪೂರ್ಣವಾಗಿ ಮುಳುಗುವುದಕ್ಕೆ ಮುಂಚೆ ಪುರೋಹಿತರು ಕೊಡುವ ಫೈನಲ್ ವಾರ್ನಿಂಗ್!

ಆರ್. ನಾಗರಾಜ್, ಗೊರೂರು

*ಬೇತಾಳಗಳಿಗೇಕೆ ಬೇವಿನ ಮರವೇ ಆಸರೆ?*

ಕಹಿ ಉಂಡು ಬೇತಾಳವಾದ ಜೀವಗಳಿಗೆ ಬೇವೇ ಮ್ಯಾಚಿಂಗ್!

ವಿ.ಎಸ್. ಹಿಂದೂಪುರ, ಬಳ್ಳಾರಿ

*ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲದು; ತಂಗಿ ಸತ್ತರೆ...?*

ಜೋಡಿ ಕೊಲೆ ಆಪಾದನೆ ಎದುರಿಸುವುದು ತಪ್ಪದು!

ಜಾಕೋಬ್ ಡಿಸೋಜ, ಕುರುವಳ್ಳಿ

*ಚಿಕ್ಕ ಮಕ್ಕಳು ಹೇಗಿರಬೇಕು, ದೊಡ್ಡ ಮಕ್ಕಳು ಹೇಗಿರಬೇಕು?*

ಚಿಕ್ಕ ಮಕ್ಕಳು ದೊಡ್ಡ ದೊಡ್ಡ ಆಸೆ ಹೊತ್ತಿರಬೇಕು, ದೊಡ್ಡ ಮಕ್ಕಳು ಚಿಕ್ಕ ಚಿಕ್ಕ ವಿಷಯಗಳಿಗೂ ಗಮನ ನೀಡಬೇಕು.

ರಾಮಚಂದ್ರ ಮಾಧವ ಪೈ, ಹೊನ್ನಾವರ

*ಜೀವನವೊಂದು ಹುಡುಗಾಟವಲ್ಲ, ಹುಡುಕಾಟ. ಏಕೆ?*

ಹುಡುಗಾಟದಲ್ಲಿ ಕಳೆದುಕೊಂಡದ್ದನ್ನು ಹುಡುಕಲು.

ಎಸ್. ಚಂದ್ರಮತಿ, ಬೆಂಗಳೂರು

*ಇಚ್ಛೆಯನ್ನರಿತು ನಡೆವ ಸತಿ ಇರಬೇಕೆಂದು ಹೇಳಿದ ಸರ್ವಜ್ಞ, ಇಚ್ಛೆಯನ್ನರಿತು ನಡೆವ ಪತಿ ಇರಬೇಕೆಂದು ಏಕೆ ಹೇಳಲಿಲ್ಲ?*

ಕೈಕೇಯಿಯ ಇಚ್ಛೆ ಅರಿತು ನಡೆದುದಕ್ಕೆ ಆದ ರಾಮಾಯಣ ಅವರಿಗೆ ತಿಳಿದಿತ್ತು!

## ಬಹುಮಾನಿತ ಪ್ರಶ್ನೆ

ಕುಬೇರಪ್ಪ ಎಂ. ವಿಭೂತಿ, ಹರಿಹರ

*ನಮ್ಮೂರ ರತಿ- ಮನ್ಮಥರನ್ನು ನಗಿಸಲು ನಮ್ಮೂರ ಯಾವ ಗಂಡಸಿಗೂ ಸಾಧ್ಯವಾಗಿಲ್ಲ. ನೀವೇನಾದರೂ ಪ್ರಯತ್ನ ಮಾಡುವಿರಾ?*

ನನ್ನ ಅಗತ್ಯವೇನಿಲ್ಲ. ನೀವೇ ಅವರಿಗೆ ಸದಾನಂದಗೌಡರು, ಶೋಭಾ ಕರಂದ್ಲಾಜೆಯ ಮುಖವಾಡ ತೊಡಿಸಿಬಿಡಿ.

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಸುತ್ತಮುತ್ತಲೆಲ್ಲಾ ದುರ್ಜನರೇ ತುಂಬಿರುವಾಗ ಸಜ್ಜನರ ಸಂಗ ಮಾಡುವುದಾದರೂ ಹೇಗೆ?*

ಪಾಪ! ಹೀಗಾಗಬಾರದಿತ್ತು! ಅಂದ ಹಾಗೇ... ನೀವು ಮಾತ್ರ ಸಜ್ಜನರು, ನಿಮ್ಮ ಮಕ್ಕಳು, ಹೆಂಡತಿ, ಅಪ್ಪ, ಅಮ್ಮ, ಸ್ನೇಹಿತರು ಎಲ್ಲರೂ ಕೆಟ್ಟವರೇನು?

ಕಾಡನೂರು ರಾಮಶೇಷ, ಹುಲಿಮಂಗಲ

*ಸಿದ್ದು ಸರ್ಕಾರಕ್ಕೆ, ಸಚಿವರಿಗೆ ನಿಮ್ಮ ಸಲಹೆ?*




ಬಿಜೆಪಿ ಮಾಡಿದುದನ್ನೆಲ್ಲಾ ಕೂಲಂಕಷವಾಗಿ ಗಮನಿಸಿ ಪಟ್ಟಿ ಮಾಡಿಕೊಳ್ಳಿ. ಆ ಪಟ್ಟಿಯಲ್ಲಿರುವ ಯಾವುದನ್ನೂ ಮಾಡಬೇಡಿ.

ಆರ್. ಮಧುಸೂದನ್, ಹಾಸನ

*ಹಿಂದಿನ ಜನ್ಮದಲ್ಲಿ ನನ್ನ ಹೆಂಡತಿ ಏನಾಗಿದ್ದಳು ಎಂಬುದನ್ನು ಕಂಡುಹಿಡಿಯುವುದು ಹೇಗೆ?*

ನೀವು ಹೆಣ್ಣಾಗಿದ್ದಿರಿ, ಅವರು ನಿಮ್ಮ ಗಂಡ ಆಗಿದ್ದರು. ಸೇಡು ತೀರಿಸಿಕೊಳ್ಳಲು ಈ ಜನ್ಮದಲ್ಲಿ ಅವರಿಗೆ ಛಾನ್ಸ್!

ಸಿಹಿಮೊಗೆ ರಮೇಶ್, ಮೈಸೂರು

*ರಿಯಾಲಿಟಿ ಶೋಗಳಲ್ಲಿ ಸ್ವಾಮೀಜಿಗಳು ಭಾಗವಹಿಸುವುದು ಈ ಸಮಾಜಕ್ಕೆ ಎಂತಹ ಸಂದೇಶ ರವಾನಿಸಬಹುದು ಸಾರ್?*

ಅವರನ್ನು ಸ್ವಾಮೀಜಿ ಎಂದು ಕರೆಯುವುದು ತಪ್ಪು ಎಂಬ ಸಂದೇಶವನ್ನು!

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ

*ಸಕ್ಕರೆ ನಿದ್ದೆ ಎಂದರೆ ಯಾವುದು ಸರ್?*

ಇರುವೆ, ಗೊದ್ದ, ನೊಣ ಮುತ್ತಿಕೊಂಡರೂ ಎಚ್ಚರವಾಗದ ನಿದ್ದೆ!

■ ರಾಮ್